ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 130-135
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದಲ್ಲಿ ರೂಪಕ–ಪ್ರತಿಮೆ

**ಸುನೀಲ ಮಾಳಿ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಕನ್ನಡ ಸಾಹಿತ್ಯದಲ್ಲಿ ರೂಪಕ ಮತ್ತು ಪ್ರತಿಮೆಗಳು ಸಾಹಿತ್ಯಿಕ ಅಭಿವ್ಯಕ್ತಿಯ ಪ್ರಮುಖ ಸಾಧನಗಳಾಗಿದ್ದು, ಕೃತಿಗಳ ಅರ್ಥವೈಶಿಷ್ಟ್ಯ ಮತ್ತು ಸೌಂದರ್ಯವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ರೂಪಕವು ಒಂದು ವಸ್ತು ಅಥವಾ ಭಾವವನ್ನು ಮತ್ತೊಂದರೊಂದಿಗೆ ಸಮೀಕರಿಸುವ ಮೂಲಕ ಹೊಸ ಅರ್ಥಸಾಧ್ಯತೆಗಳನ್ನು ಸೃಷ್ಟಿಸಿದರೆ, ಪ್ರತಿಮೆಯು ಓದುಗರ ಮನಸ್ಸಿನಲ್ಲಿ ದೃಶ್ಯ, ಭಾವನೆ ಮತ್ತು ಅನುಭವಗಳನ್ನು ಮೂಡಿಸುತ್ತದೆ. ಕನ್ನಡ ಕಾವ್ಯ, ಕಥೆ, ಕಾದಂಬರಿ ಹಾಗೂ ನಾಟಕಗಳಲ್ಲಿ ರೂಪಕ–ಪ್ರತಿಮೆಗಳ ಬಳಕೆಯು ಭಾಷೆಯ ಸೃಜನಶೀಲತೆ ಮತ್ತು ಕಲಾತ್ಮಕತೆಯನ್ನು ಪ್ರತಿಬಿಂಬಿಸುತ್ತದೆ. ಈ ಅಧ್ಯಯನವು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ರೂಪಕ–ಪ್ರತಿಮೆಗಳ ಸ್ವರೂಪ, ಬಳಕೆ ಮತ್ತು ಮಹತ್ವವನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಒಟ್ಟಾರೆಯಾಗಿ, ಕನ್ನಡ ಸಾಹಿತ್ಯದ ಅರ್ಥವಿಸ್ತಾರ, ಭಾವತೀವ್ರತೆ ಮತ್ತು ಸೌಂದರ್ಯಾನುಭವವನ್ನು ರೂಪಕ–ಪ್ರತಿಮೆಗಳು ಹೇಗೆ ಸಮೃದ್ಧಗೊಳಿಸುತ್ತವೆ ಎಂಬುದನ್ನು ಈ ಲೇಖನ ಪರಿಶೀಲಿಸುತ್ತದೆ.*

***Keywords:*** *ರೂಪಕ, ಪ್ರತಿಮೆ, ಕನ್ನಡ ಸಾಹಿತ್ಯ, ಕಾವ್ಯಸೌಂದರ್ಯ, ಸಾಹಿತ್ಯಿಕ ಅಭಿವ್ಯಕ್ತಿ.*

## ಪೀಠಿಕೆ

ಕವಿ ಪ್ರೌಢಿಮೆಯು ಭಾಷಾ ಮಾಧ್ಯಮದ ಮೂಲಕ ಅಭಿವ್ಯಕ್ತವಾಗುವಾಗ ಮೈದೋರುವ ಉಕ್ತಿ ವೈಚಿತ್ರ್ಯಗಳೇ ಪ್ರತಿಮೆ ಅಥವಾ ರೂಪಕಗಳಾಗಿವೆ. ರೂಪಕವು ಭಾರತೀಯ ಕಾವ್ಯಮೀಮಾಂಸೆ ರೂಪವಾದರೇ ಪ್ರತಿಮೆಯು ಪಾಶ್ಚಾತ್ಯ ಕಾವ್ಯಮೀಮಾಂಸೆಯ ರೂಪ. ಒಂದು ಮತ್ತೊಂದಕ್ಕಿರುವ ಸಾದೃಶ್ಯಗಳನ್ನು ಗುರುತಿಸಿ, ಗ್ರಹಿಸಿ, ಅವುಗಳನ್ನು ಸಂಘಟಿಸುವ ಕ್ರಿಯೆಯೇ ಪ್ರತಿಭಾ ವ್ಯಾಪಾರದ ಮುಖ್ಯ ಲಕ್ಷಣವಾಗಿದೆ. 'ಕೋಲ್ರಿಜ್' ಈ ಪರಿಕಲ್ಪನೆಯನ್ನು ಫ್ಯಾನ್ಸಿ(fancy) ಎಂದು ಹೆಸರಿಸುತ್ತಾನೆ. ಸಾದೃಶ್ಯಗಳನ್ನು ಹಿಡಿದು ಕೂಡಿಸುವ ಸಾಮರ್ಥ್ಯವೇ fancy. ಇದು imagination ಎಂಬ ಕಾವ್ಯ ನಿರ್ಮಾಣ ಸಾಮರ್ಥ್ಯದ ಒಂದು ಮಜಲು. ಸಾದೃಶ್ಯಗಳ ಹೊಂದಾಣಿಕೆ ಅಥವಾ ಉಪಮಾಕ್ರಿಯೆ ವಾಸ್ತವವಾಗಿ ಕಾವ್ಯ ನಿರ್ಮಾಣದ ಮೊದಲ ಹಂತ. ಉಪಮಾ ಮೂಲವಾದ ವಿವಿಧ ಅಭಿವ್ಯಕ್ತಿಗಳ ಮೂಲಕ ಕ್ರಿಯಾಶೀಲವಾಗುವ ಕವಿ ಪ್ರತಿಭೆ. ಈ ಅಭಿವ್ಯಕ್ತಿಗಳ ಪಂಕ್ತಿಯಲ್ಲಿ 'ರೂಪಕ' ವಿಶಿಷ್ಟವಾದುದೆಂದು ಎಣಿಸಲಾಗಿದೆ.

ರೂಪಕವನ್ನು ಮೊದಲ ಬಾರಿಗೆ ಹೆಸರಿಸಿದವನು 'ಭರತ'. ಈತನು ತನ್ನ ಕೃತಿಯಾದ 'ನಾಟ್ಯಶಾಸ್ತ್ರ'ದಲ್ಲಿ ಅಲಂಕಾರದ ವಿಷಯ ಕುರಿತು ವಿವೇಚಿಸುತ್ತಾ

***Please cite this article as:*** ಸುನೀಲ ಮಾಳಿ. (2026). ಕನ್ನಡ ಸಾಹಿತ್ಯದಲ್ಲಿ ರೂಪಕ–ಪ್ರತಿಮೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(4), 130–135

ಉಪಮ, ರೂಪಕ, ದೀಪಕ, ಯಮಕ ಎಂಬ ನಾಲ್ಕು ಅಲಂಕಾರಗಳನ್ನು ತಿಳಿಸಿದ್ದಾನೆ.

***ಉಪಮಾ ರೂಪಕಂ ಚೈವ ದೀಪಕಂ ಯಮಕಂ ತಥಾ।***

***ಅಲಂಕಾರಾಸ್ತು ವಿಜ್ಞೇಯಾಶ್ಚತ್ವಾರೋ ಕಾವ್ಯಸಂಶ್ರಯಾಃ॥***

ನಾಟ್ಯಶಾಸ್ತ್ರ ಗ್ರಂಥದ 16ನೇ ಅಧ್ಯಾಯದಲ್ಲಿ ಕಾವ್ಯದ ಲಕ್ಷಣಗಳನ್ನು ಚರ್ಚಿಸುವಾಗ ನಾಲ್ಕು ಮುಖ್ಯ ಅಲಂಕಾರಗಳನ್ನು ಹೆಸರಿಸಲಾಗಿದೆ. ಆರಂಭದಲ್ಲಿ ರೂಪಕವನ್ನು ಅಲಂಕಾರಗಳ ಪಟ್ಟಿಯಲ್ಲಿ ಸೇರಿಸಿದ್ದನ್ನು ಗಮನಿಸುತ್ತೇವೆ. ನಂತರ ರೂಪಕವನ್ನು ಕೇವಲ ಅಲಂಕಾರವಾಗಿ ಮಾತ್ರವಲ್ಲದೆ ಅದನ್ನು ಪ್ರತಿಮೆಯಾಗಿ ಪ್ರತೀಕವಾಗಿ, ಸಂಕೇತವಾಗಿ ವಿವಿಧ ಅರ್ಥಗಳಲ್ಲಿ ಬಳಸಲಾಗಿದೆ. ಇಲ್ಲಿ ರೂಪಕವನ್ನು ಪ್ರತಿಮೆಯಾಗಿ ಬಳಸಲು ಕಾಲಮಾನದ ಗಡುವು ಹಾಗೂ ಕಾವ್ಯ ಮೀಮಾಂಸೆಯ ಬೆಳವಣಿಗೆಯೂ ಕಾರಣವಾಗಿದೆ.

ಧ್ವನಿ, ಧ್ವನಿಮಾಗಳ ಮೂಲಕ ಒಂದು ಭಾಷೆಯು ಆಕಾರವನ್ನು ಪಡೆಯುವ ಕ್ರಮವನ್ನೇ ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಅಲಂಕಾರವೆಂದು ಕರೆಯುವರು. ಈ ರೀತಿಯ ಆಕೃತಿ ಅಲಂಕಾರ ಮೂಲದಲ್ಲಿ ಸಾದೃಶ್ಯ. ಸಾದೃಶ್ಯಗಳಿಂದ ಉಪಮೆಯಾಗಿ, ರೂಪಕ ಪ್ರತಿಮೆಯಾಗಿ, ಅನೇಕ ಮುಖಗಳಲ್ಲಿ ಕಾಣಿಸಿಕೊಂಡಿದೆ. ಈ ಉಪಮೆ ಒಂದೊಂದೆ ತನ್ನ ಅಂಗಗಳನ್ನು ಲುಪ್ತ ಮಾಡಿಕೊಳ್ಳುತ್ತ ರೂಪಕಾಲಂಕಾರಕ್ಕೆ ದಾರಿ ಮಾಡಿಕೊಡುತ್ತದೆ. ಒಂದು ರೀತಿಯಲ್ಲಿ ಇದು ಅಭಿವ್ಯಕ್ತಿಯು ಶಿಥಿಲತೆಯಿಂದ ಸಂಗ್ರಾಹಕತ್ವದ ಕಡೆಗೆ ಹೋಗುವುದನ್ನು ಸೂಚಿಸುತ್ತದೆ. ರೂಪಕ ಒಂದು ಅಲಂಕಾರವಾಗಿ ಅಭಿವ್ಯಕ್ತಿಯ ಒಂದು ಪ್ರಕಾರವಾಗಿದೆ.

ಉಪಮಾಲಂಕಾರದಲ್ಲಿ ಉಪಮಾನ, ಉಪಮೇಯಗಳೆರಡೂ ಅವುಗಳ ಸಾದೃಶ್ಯದ ಸೊಗಸಿನಿಂದ ಏಕಕಾಲಕ್ಕೆ ಪ್ರತೀತವಾಗುತ್ತಿರುತ್ತವೆ. ಆದರೆ ರೂಪಕದಲ್ಲಿ ಅವೆರಡರ ನಡುವಣ ಭೇದ ಮರೆಯಾಗುತ್ತದೆ. 'ಉಪಮಾನ, ಉಪಮೆಗಳ ಅಭೇದ ಆರೋಪವೇ ರೂಪಕದ ಲಕ್ಷಣ ಎಂದು ಭಾಮಹ, ವಾಮನ, ಮಮ್ಮಟಾದಿ ಅಲಂಕಾರಿಕರು ಹೇಳಿರುವುದನ್ನು ಗಮನಿಸಬಹುದು'. ರೂಪಕ ಎಂದರೆ ಹೋಲಿಸಲ್ಪಡುವ ಎರಡು ಸಂಗತಿಗಳ ಅಭೇದ ಅಲ್ಲ. ಅಭೇದದ ಆರೋಪ ಎಂಬ ಮಾತು ಮುಖ್ಯವಾದದ್ದು. ಉಪಮೆಯಲ್ಲಿ ಕಾಣಲಾಗದ ಸಂಗ್ರಹ ಗುಣ, ಪರಿಣಾಮದ ತೀವ್ರತೆ ಇವುಗಳೇ ರೂಪಕದ ಅಭಿವ್ಯಕ್ತಿಯ ಅತ್ಯುತ್ತಮ ಪ್ರಕಾರ ಎಂದೆನಿಸಿವೆ. ಕಾವ್ಯ ಕ್ರಿಯೆಯಲ್ಲಿ ಅತ್ಯಂತ ಮುಖ್ಯವಾದುದೆಂದರೆ "ರೂಪಕ ಪ್ರಯೋಗ ಸಾಮರ್ಥ್ಯ" ಎಂದು 'ಅರಿಸ್ಟಾಟಲ್' ಹೇಳುತ್ತಾನೆ, ಒಬ್ಬ ನಿಜವಾದ ಕವಿಯ ಸಾಮರ್ಥ್ಯವನ್ನು ಅಳೆಯುವುದು ಅವನು ಉಪಯೋಗಿಸುವ ರೂಪಕಗಳ ಸ್ವಂತಿಕೆ ಹಾಗೂ ಶಕ್ತಿಗಳ ಮೂಲದಿಂದಲೇ ಎಂದು ಹರ್ಬರ್ಟ್ ರೀಡ್ ಹೇಳುತ್ತಾನೆ.

ಪ್ರತಿಮೆ ಎಂಬುದು ಮೂಲತಃ ಕವಿ ಮನಸ್ಸಿನ ಸೃಜನೆ. ಪ್ರತಿಮೆಯೂ ಯಾವುದೇ ಸಂಬಂಧವಿದೆಯೆಂಬಂತೆ ತೋರುವ ಎರಡು ಅಥವಾ ಹೆಚ್ಚಿನ ವಸ್ತುಗಳ ಹೋಲಿಕೆಯಿಂದ ಸಂಭವಿಸುತ್ತದೆ.

ಕಾವ್ಯದಲ್ಲಿ ವಾಚ್ಯ ಒಂದು ಆಕಾರವನ್ನು ಪಡೆಯುವ ಕ್ರಮವನ್ನೇ ಅಲಂಕಾರವೆಂದು ಹೇಳಲಾಗುತ್ತದೆ. ಅಲಂಕಾರ ಅಥವಾ ಅಲಂಕರಿಸು ಎಂದರೆ ಕಾವ್ಯವನ್ನು ಹೊರಗಿನ ಸಲಕರಣೆಗಳಿಂದ ಬೇಕಾದಾಗ ಶೃಂಗರಿಸುವುದು, ಅಲಂಕಾರವೆಂಬುದು ಕಾವ್ಯ ಸೃಷ್ಟಿಯ ಮೂಲಕ್ಕೆ ಸಂಬಂಧಿಸಿದೆ. ಈ ದೃಷ್ಟಿಯಿಂದ ರೂಪಕ, ಉಪಮೆ ಎಂದಿರುವುದು ಕಾವ್ಯವು ಆಕಾರಪಡೆಯುತ್ತಿರುವ ಒಂದೊಂದು ಕ್ರಮವನ್ನು ಅದರ ಆಂತರಿಕ ವಿಕಾಸವನ್ನು ಸೂಚಿಸುವ ಅಂಶಗಳಾಗಿವೆ. ವಿಶಾಲ ಅರ್ಥದಲ್ಲಿ ರೂಪಕ ವಿಧಾನಕ್ಕೂ ಅನ್ವಯಿಸಿ ಹೇಳಬಹುದು.

ಸಾಮಾನ್ಯವಾಗಿ ಉಪಮೆ, ರೂಪಕಗಳ ಮುಂದುವರಿದ ಅಥವಾ ಅವುಗಳನ್ನು ಅಂತರ್ಗತಗೊಳಿಸಿಕೊಂಡು ರೂಪುಗೊಂಡ ಅಭಿವ್ಯಕ್ತಿಯ ವಿಧಾನವೆಂದು ಪ್ರತಿಮೆಯನ್ನು ಹೇಳಬಹುದು. ಈ ಉಪಮೆ, ರೂಪಕ, ಪ್ರತಿಮೆಯಾಗಲಿ ಎಲ್ಲವೂ ಕವಿಯು ನಿರ್ಮಿಸಬೇಕಾದ ಅವನ ಒಟ್ಟು ಕಾವ್ಯಕೃತಿಯ ನಿರ್ಮಾಣಕ್ಕೆ ದುಡಿಯುವುದರಿಂದ ಅವುಗಳನ್ನು ಒಂದರಿಂದೊಂದು ಪ್ರತ್ಯೇಕವೆಂದು ಭಾವಿಸದೆ, ಅವನ ಕಾವ್ಯವೊಂದು ಆಕೃತಿಯಾಗಿ ವಿಕಾಸಗೊಳ್ಳುವ ಬಗೆಯನ್ನೇ ಅವು ಸೂಚಿಸುತ್ತವೆಂದು ತಿಳಿಯುವುದೇ ಉಚಿತ.

ಇದರೊಂದಿಗೆ ರೂಪಕದ ಮಹತ್ವವನ್ನು ಅರಿತು ಕಾವ್ಯದಲ್ಲಿ ಇದರ ಪ್ರಯೋಜನವನ್ನು ಗಮನಿಸಿದಾಗ, ವ್ಯಕ್ತವಾಗುವ ಒಂದು ಅಭಿಪ್ರಾಯವನ್ನು ಗಮನಿಸಬಹುದಾಗಿದೆ. ರೂಪಕ ಸಂವಿಧಾನ ಕವಿತೆಯ ಆಂತರಿಕ ಅರ್ಥದ ಚೌಕಟ್ಟನ್ನು ನಿರ್ಮಿಸುವ ಕವಿಯ ದೃಷ್ಟಿಕೋನವನ್ನು ಸೂಚಿಸುವ ತಾಂತ್ರಿಕ ಸಾಧನವಾಗಿ ಭಾವಿಸಲ್ಪಟ್ಟಿದೆ. ಪ್ರತಿಮೆ ಒಂದು ಪದ, ಒಂದು ಉಪಮೆ, ಒಂದು ರೂಪಕ, ಒಂದು ವಾಕ್ಯ, ಸಮುದಾಯ ಅಥವಾ ಇಡೀ ಕಾವ್ಯವೇ ಪ್ರತಿಮೆಯಾಗಬಹುದು ಎಂದು ಪಾಶ್ಚಾತ್ಯ ಚಿಂತಕರು ಹೇಳಿದರೆ, ವರ್ಣಗಳಿಂದ ಹಿಡಿದು ಪೂರ್ಣ ಪ್ರಬಂಧದವರೆಗೆ ಕಾವ್ಯ ಶರೀರದ ಪ್ರತಿಯೊಂದು ಅಂಶವು ವ್ಯಂಜಕವಾಗಬಲ್ಲುದು ಎಂದು ಭಾರತೀಯ ಅಲಂಕಾರಿಕರು ಹೇಳುತ್ತಾರೆ.

'ರೂಪಕ ಎಂದರೆ ಹೋಲಿಸಲ್ಪಡುವ ಎರಡು ಸಂಗತಿಗಳ ಅಭೇದ ಅಲ್ಲ; ಅಭೇದದ ಆರೋಪ ಎಂಬ ಮಾತಿದೆ. ಸಾಮ್ಯವಿದ್ದಾಗ ಉಪಮೆ, ಅತಿಸಾಮ್ಯವಿರುವಾಗ ರೂಪಕ' ಮಾಣಿಕ್ಯಚಂದ್ರನ ಮಾತು ರೂಪಕವನ್ನು ಕುರಿತ ಸರಿಯಾದ ವಿವರಣೆಯಾಗಿದೆ. 'ರೂಪದಲ್ಲಿನ ಕಲೆಗಾರಿಕೆ ಎಂದರೆ ಎರಡು ವಸ್ತುಗಳ ನಡುವಿನ ಸಾಮ್ಯವನ್ನು ಕನಿಷ್ಠ ಮಿತಿಗೆ ಇಳಿಸುವುದು ಎಂದು ಹರ್ಬರ್ಟ್ ರೀಡ್ ಹೇಳಿದ್ದಾರೆ'.

ರೂಪಕ ಎರಡು ತಲೆಗಳನ್ನುಳ್ಳ ಏಕದೇಹಿಯಂತೆ, ಒಂದೇ ಕಾಲಕ್ಕೆ ಎರಡೂ ಕಡೆಗೆ ನೋಡುವಂತೆ ಮತ್ತು ಎರಡು ವಸ್ತುಗಳನ್ನೂ ಬಹುಮಟ್ಟಿಗೆ ಒಂದೇ ಎಂಬಂತೆ ತೋರಿಸುವ ಒಂದು ಅಭಿವ್ಯಕ್ತಿ, ಆದರೆ ಇಲ್ಲಿ ಇರುವ ಎರಡು ಅಂಶಗಳನ್ನು ಓದುಗರು ಗುರುತಿಸಬಲ್ಲರಾದರೂ, ಆ ಎರಡನ್ನೂ ಕೂಡಿಸಿ ಮೂರನೆಯದೊಂದನ್ನು ಅನುಭವಕ್ಕೆ ತಂದುಕೊಡುವುದೇ ರೂಪಕದ ಸ್ವಾರಸ್ಯ.

'ಅನುಭವದ ಹೆಣಿಗೆಯೊಳಗೆ ಹೆಚ್ಚು ವೈವಿಧ್ಯಮಯವಾದ ಅಂದಗಳು ಬಂದು ಸೇರಿಕೊಳ್ಳುವ ಒಂದು ವಿಧವಾದ ಅರ್ಥ ಮುಚ್ಚುಮರೆಯ ವಿಧಾನವಾಗಿದೆ ರೂಪಕ ಎಂದು ರಿಚರ್ಡ್ಸ್ ಹೇಳುತ್ತಾನೆ'.

ರೂಪಕದ ವಿಶಿಷ್ಟ ಲಕ್ಷಣವೇ ಸಂಗ್ರಹಾಕತ್ವ, ನಿಜವಾದ ಬರವಣಿಗೆ ಎಂದರೆ ಅತ್ಯಂತ ಅಡಕವಾಗಿ ಭಾವ ಭಾವನೆಗಳನ್ನು ಅಭಿವ್ಯಕ್ತಪಡಿಸಬಲ್ಲ ಉಕ್ತಿಯ ಅನ್ವೇಷಣೆ. ಈ ಅನ್ವೇಷಣೆಯ ಪರಿಣಾಮವಾಗಿ ಭಾಷೆ ಹದವಾಗುತ್ತದೆ. ಭಾಷೆಯನ್ನು ಹದಗೊಳಿಸುವ ಕ್ರಿಯೆಯೇ ರೂಪಕ ನಿರ್ಮಾಣದ ವಿಧಾನವಾಗಿದೆ.

ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಅರಿಸ್ಟಾಟಲ್ ಕಾಲದಿಂದಲೂ ರೂಪಕದ ಮಹತ್ವವನ್ನು ಕುರಿತು ಚರ್ಚೆ ನಡೆದಿವೆ. ರೂಪಕವನ್ನು ಕಾವ್ಯಾಭಿವ್ಯಕ್ತಿಯ ಅತ್ಯುತ್ಕೃಷ್ಟ ವಿಧಾನವೆಂದು ಹೇಳುತ್ತ ಬಂದ ಪರಂಪರೆಯಲ್ಲಿ ಇತ್ತೀಚೆಗೆ ಆಧುನಿಕ ಸಾಹಿತ್ಯ ನಿರ್ಮಿತಿಯ ಸಂದರ್ಭದಲ್ಲಿ 'ಇಮೇಜ್' Image ಎಂಬ ಮಾತು ವಿಶೇಷವಾಗಿ ಬಳಕೆಯಾಗತೊಡಗಿದೆ. 'Image' ಎನ್ನುವುದು ಒಂದು ಉಕ್ತಿ ವೈಚಿತ್ರ್ಯ. ಉಪಮೆ–ರೂಪಕಗಳಂತೆ ಎನ್ನುವುದು ಕಾವ್ಯಾಭಿವ್ಯಕ್ತಿಯ ಮೂಲತತ್ವ, ಇಮೇಜ್ ಎಂಬುದು ಅಭಿವ್ಯಕ್ತಿಯ ಒಂದು ವಿಶಿಷ್ಟ ವಿಧಾನ. 'ಪ್ರತಿಮೆ' ಎಂಬ ಮಾತನ್ನು Imageಗೆ ಸಂವಾದಿಯಾಗಿ ಮೊದಲು ಬಳಸಿದವರು ಕುವೆಂಪು. 'ಒಬ್ಬ ನಿಜವಾದ ಕವಿಯ ಸಾಮರ್ಥ್ಯವನ್ನು ಅಳೆಯಬೇಕಾದದ್ದು

ಅವನು ಪ್ರಯೋಗಿಸುವ ರೂಪಕಗಳ ಸ್ವಂತಿಕೆ ಹಾಗೂ ಶಕ್ತಿಗಳಿಂದಲೇ' ಎಂದು ಹರ್ಬರ್ಟ್ ರೀಡ್ ಹೇಳುತ್ತಾರೆ. ಸಾಹಿತ್ಯದಲ್ಲಿ ವಿವಿಧ ಪ್ರವೃತ್ತಿಗಳು ಬರುತ್ತವೆ ಹೋಗುತ್ತವೆ, ಬರವಣಿಗೆಯ ರೀತಿಗಳು ಬದಲಾಗುತ್ತದೆ. ಛಂದೋ ವಿಧಾನಗಳೂ ಬೇರೆ ಬೇರೆಯಾಗುತ್ತವೆ, ಆದರೆ ಕಾವ್ಯದ ಜೀವಸತ್ವ ಹಾಗೂ ಕವಿಯ ನಿಜವಾದ ಮಹತ್ವ ತಿಳಿಯುವುದು ರೂಪಕದ ಬಳಕೆಯಿಂದ ಮಾತ್ರ.

ಭಾವದೀಪ್ತವಾದ ಶಬ್ಧಚಿತ್ರ ಮತ್ತು ಸಂದರ್ಭವೊಂದರ ಭಾವತೀವ್ರತೆಯನ್ನು ಇರುವ ಹಾಗೇ ರೂಪಕಾತ್ಮಕವಾಗಿ ಕಟ್ಟಿಕೊಡುವ ಸ್ವರೂಪ ರೂಪಕದ್ದು. 'ರೂಪಕ ಕಾವ್ಯದ ಜೀವನಾಳದಂತಿದೆ' ರೂಪಕ ಕವಿ ಮನಸ್ಸಿನ ಸೃಜನೆಯಾಗಿದೆ. ಎಜ್ರಾಪೌಂಡ್ ಹೇಳುವಂತೆ, 'ಸಂದರ್ಭವೊಂದರ ಬೌದ್ಧಿಕ ಹಾಗೂ ಭಾವುಕ ಸಂಕೀರ್ಣತೆಯೊಂದನ್ನು ಹಿಡಿದಿಡುವ ಕ್ರಮವೇ ರೂಪಕಗಳ ಪ್ರಯೋಗವಾಗಿದೆ'.

ರೂಪಕ ಎಂದರೆ ಒಂದು ಶಬ್ದಚಿತ್ರವೆಂಬ ಮಾತನ್ನು ಒತ್ತಿ ಹೇಳಿ, ಅದಕ್ಕೆ 'ಅಗಾಧವಾದ ಧ್ವನಿ ಪ್ರಚುರತೆ ಇರಬೇಕು' ಎಂಬುದನ್ನು ಅದರ ಮುಖ್ಯ ಲಕ್ಷಣವನ್ನಾಗಿ ಹೇಳಬಹುದು.

ಪಂಪನು ರೂಪಕಗಳನ್ನು ಬಳಸುವುದರಲ್ಲಿ ಆದಿಯವನು. ಅವನು ಬಳಸುವ ಕಾವ್ಯಮಯವಾದ ರೂಪಕಗಳು ಕಾವ್ಯದ ತುಂಬಾ ವಿಜೃಂಭಿಸುತ್ತವೆ. ಮುಖ್ಯವಾಗಿ 'ಇದು ಪಾತಾಳ ಬಿಲಕ್ಕೆ ಬಾಗಿಲಿದು' ಎನ್ನುವ ಮಾತಂತು ರೋಮಾಂಚನಕಾರಿಯಾಗಿದೆ. ಇಲ್ಲಿ ದುರ್ಯೋಧನನಿಗೆ ಮುಂದೊದಗುವ ಭವಿಷ್ಯ ನುಡಿಯಂತೆ ಕವಿ ಚಿತ್ರಿಸಿದ್ದಾನೆ. "ಸರೋವರ ಹೇಗೆ ಕಂಡಿತು ಎಂಬುದನ್ನು ರೂಪಕಗಳಿಂದ ಬಣ್ಣಿಸುವಂತೆ ತೋರಿದರೂ ಅದು ಗೌಣ ಮುಖ್ಯವಾದುದು ಅದರಿಂದ ಹೊಮ್ಮುವ ಧ್ವನಿ ಪಾತಾಳ ಬಿಲಕ್ಕೆ ಬಾಗಿಲ್ ಎನ್ನುವುದರಿಂದ ಆಳವಾಗಿತ್ತೆಂದೂ ಘೋರಾಂಧಕಾರಕ್ಕೆ ಮಾಡಿದ ಕೂಪಂ ಎನ್ನುವುದರಿಂದ ನೀರು ಕರ್ರಗಿತ್ತೆಂದೂ"[1] ಈ ರೀತಿಯಾಗಿ ಪಂಪನು ಕಾವ್ಯದ ತುಂಬೆಲ್ಲ ರೂಪಕಗಳ ಬಳ್ಳಿಗಳನ್ನೆ ಹೆಣೆದಿದ್ದಾನೆ.

ಪಂಪನಲ್ಲದೆ ರೂಪಕದ ಕುರಿತಾಗಿ ಮಾತು ಬಂದಾಗ ಕನ್ನಡ ಸಾಹಿತ್ಯದಲ್ಲಿ ಅಗ್ರಗಣ್ಯರನ್ನು ನೆನೆಯಲೆ ಬೇಕು. "ವಾಗ್ದೇವಿಯ ಕನ್ನಡ ಕುವರಿಗೆ ರನ್ನ ಐರಾವತ, ಕುಮಾರವ್ಯಾಸ ಉಚ್ಚೈಶ್ರವಸ್ಸು"[2]. ಇಂದ್ರನ ವಾಹನಗಳಾದ ಐರಾವತ(ಬಿಳಿಯ ಆನೆ), ಉಚ್ಚೈಶ್ರವಸ್ಸು(ಬಿಳಿಯ ಕುದುರೆ)ಯಂತೆ ಕನ್ನಡ ಸಾಹಿತ್ಯ ದೇವತೆ(ವಾಗ್ದೇವಿ)ಗೆ ರನ್ನ ಮತ್ತು ಕುಮಾರವ್ಯಾಸರು ಹಾಗೆ ಕೊಡುಗೆ ನೀಡಿದ್ದಾರೆ. ಅಂದರೆ ಸ್ವರ್ಗ ಲೋಕದ ಅಧಿಪತಿ ಇಂದ್ರನ ವಾಹನಗಳಾದ ಐರಾವತ ಉಚ್ಚೈಶ್ರವಸ್ಸು ಹೇಗೆ ಪ್ರಸಿದ್ದಿ ಪಡೆದಿದ್ದವೋ ಹಾಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕನ್ನಡ ಭಾಷೆಗೆ ಕಿಂಚಿತ್ತೂ ಲೋಪ ಬರದ ಹಾಗೆ ಬಳಸಿ ಮುನ್ನಡೆಸಿದ್ದರು.

"ನಾರಾಣಪ್ಪನು ರೂಪಕ ಸಾಮ್ರಾಜ್ಯದ ಚಕ್ರವರ್ತಿ. ರೂಪಕದ ಮುಖಾಂತರ ಮಾತಾನಾಡುವುದು ಅವನ ಸ್ವಭಾವ. ಬುದ್ಧಿಯನ್ನು ಆಯಾಸಗೊಳಿಸಿ ಬಹಳ ಯೋಚನೆಮಾಡಿ ಅಲ್ಲಿಂದಿಲ್ಲಿಂದ ಎರಡು ಪದಾರ್ಥಗಳನ್ನು ಹಿಡಿದು ತಂದು ಬಲಾತ್ಕಾರ ಸಾದೃಶ್ಯವನ್ನು ಕಲ್ಪಿಸುವ ಕೃತಕ ರೂಪಕಾಲಂಕಾರವಲ್ಲ ಅವನಲ್ಲಿ ಕಂಗೊಳಿಸುವು"[3]. ದೃಷ್ಟಾಂತಗಳೆಂದರೆ – 'ಅಪಕೀರ್ತಿ ನಾರಿಯ ಶರಗ ಹಿಡಿದರು'; 'ನಮ್ಮ ಪಾಪದ ರಾಸಿ ಬೆಂದುದು'; 'ಅದು ಛಾಯ ತಾಗಿದ ಹಂದಿಯೇ ರಾಧೇಯ'; 'ನಮ್ಮ ಪಾಪದ ರಾಸಿ ಬೆಂದುದು'; 'ಎನ್ನ ಪುಣ್ಯವು ಗಾಳಿಗೊಡ್ಡಿದ ಸೊಡರಲಾ'; 'ಬೆಳದಿಂಗಳಲ್ಲಿ ಮೈ ಬೆವರುವುದೆ?'; ಘಟೋತ್ಕಚನ ದೇಹವು 'ಕಾರಿರುಳ ಪಟ್ಟಣಕ್ಕೆ ಚಂದ್ರನ ತೋರಣವ' ಬಿಗಿದಂತಿದ್ದಿತಂತೆ! ಕಾಣುತ್ತಿತ್ತು. ಹೀಗೆ ಮುಂತಾದ ರೀತಿಯಲ್ಲಿ ರೂಪಕಗಳನ್ನು ಬಳಸಿ ಕನ್ನಡದ ಹಿರಿಮೆಯನ್ನು ತನ್ನ ಕಾವ್ಯದಲ್ಲಿ ಚಿತ್ರಿಸಿರುವುದನ್ನು ಈ ಮೇಲಿನ ದೃಷ್ಟಾಂತಗಳಿಂದ ಅರಿಯಬಹುದಾಗಿದೆ.

ದ್ರೌಪದಿಯ ಬಿಡುಮುಡಿ, ಕುಮಾರವ್ಯಾಸನ ಮಾತಿನಲ್ಲಿ ಹೇಳುವುದಾದರೆ, "ದ್ರೌಪದಿಯ ಮುಡಿಯನ್ನು 'ಸಿರಿಮುಡಿ' ಎಂಬ ವಿಶೇಷಣದಿಂದ ಕರೆಯುವುದಕ್ಕೆ ಬದಲಾಗಿ ಶ್ರೀಮುಡಿ ಎಂಬ ವಿಶೇಷಣವನ್ನೊಡ್ಡಿ ಧ್ವನಿಯಿಂದ ಅದನ್ನು ಪವಿತ್ರತರವನ್ನಾಗಿ ಮಾಡಿದ್ದಾನೆ" ನಾರಾಣಪ್ಪನ ಈ ಮಾತು ಬಳಸುವ ಸಂದರ್ಭದಲ್ಲಿ ಒಂದು ಅಧ್ಬುತವಾದ ಪದ ರೂಪಕವಾಗಿದೆ.

ಪಂಪನು ದ್ರೌಪದಿಯ ಜಡೆಮುಡಿಯನ್ನು ಭೀಮನು ಕಟ್ಟುವಾಗ 'ಪೇಳ ಸಾಮಾನ್ಯಮ ಬಗೆಯ ಭವಕ್ಕೇಶಪಾಶ ಪ್ರಪಂಚಂ' ಎಂದು ಭೀಮನ ಬಾಯಿಂದ ಅಡಿಸುವ ಈ ವರ್ಣನೆಯೊಳಗಣ 'ಕೇಶಪಾಶ ಪ್ರಪಂಚ' ಎಂಬುದು ಇಡೀ ಮಹಾಭಾರತದ ರಣರಂಗಕ್ಕೆ ಮೂಲವಾದ ಮತ್ತು ಮಹಾಭಾರತದ ಸಮಸ್ತ ಘಟನೆಗಳನ್ನೂ ಹೆಣೆದುಕೊಂಡ ಅತ್ಯಂತ ಶಕ್ತವಾದ ರೂಪಕ – ಪ್ರತಿಮೆಯಾಗಿದೆ.

ಸಂದರ್ಭ, ಸಮಯ, ಸನ್ನಿವೇಶಗಳಿಗೆ ತಕ್ಕಂತೆ ಆ ಕ್ಷಣದಲ್ಲಿ ಮಿಂಚಿದ ಭಾವಕ್ಕೆ ರೂಪು ಕೊಟ್ಟಾಗ ಮೂಡಿ ಬಂದವು ರೂಪಕಗಳು. ಇವು ಕರ್ತೃವಿನ ಒಳಗಣ ಹಾಗೂ ಹೊರಗಣ ಪ್ರತಿಭೆಯ ಪರಿಣಾಮ ಫಲಗಳು, ಹೀಗೆ ಇವು ಅಕೃತಕ ಶೀಘ್ರ ಸ್ಫುರಣದ ಸ್ಫುಲಿಂಗಗಳಾದುದರಿಂದಲೇ ಇವು ಘನಿಸಿ ಘನಿಸಿ ಕಿಡಿಕಿಯಾಗಿ ಸಿಡಿದು ಬಂದಿವೆ, ರೂಪಕಗಳು ಅತಿ ಸಣ್ಣವು ಆದರೆ ಮನಃಫಲಕದ ಮೇಲೆ ಲೋಕಾನುಭವವು ಬಂದು ಬಡಿದಾಗ ಹೊರಹೊಮ್ಮುವ ಅನುರಣನಗಳಾಗಿವೆ.

ವಚನ ಸಾಹಿತ್ಯದಲ್ಲಿ ಇಂತಹ ರೂಪಕಗಳ ಸಾಲು ಸಾಲು ಮಡುಗಟ್ಟಿವೆ. 12ನೇಯ ಶತಮಾನದ ಎಲ್ಲ ಶರಣರು ಈ ರೂಪಕವನ್ನು ಅಚ್ಚುಕಟ್ಟಾಗಿ ನಿಭಾಯಿಸಿರುವುದನ್ನು ಕಾಣಬಹುದು ಅದರಲ್ಲಿ ನಾವು ಬಸವಣ್ಣನವರ ರೂಪಕದ ದೃಷ್ಟಿಯನ್ನು ಮಾರ್ಮಿಕವಾಗಿ ಚರ್ಚಿಸಬಹುದಾಗಿದೆ. ಬಸವಣ್ಣನವರು ಭಾವದ ಒಂದು ತೀವ್ರತೆಯಲ್ಲಿ ರೂಪಕ ನಿರೂಪಣದಿಂದ ಈ ಕಾರ್ಯವನ್ನು ಸಾಧಿಸಿ ಬಿಡುತ್ತಾರೆ. ಅದರಂತೆ ಇದು ಅಲ್ಲ, ಅದೇ ಇದು ಎಂದು ಹೇಳುವ ರೀತಿಯಲ್ಲಿ ಸಾಂದ್ರತೆ ತೀವ್ರತೆಗಳು ಹೆಪ್ಪುಗಟ್ಟಿಕೊಂಡು ವಜಧಾರೆಯಾಗಿ ಮನಕ್ಕೆ ಅಂಟಿ ಬಿಡುತ್ತವೆ. ಕೆಲವು ನಿದರ್ಶನಗಳೆಂದರೆ,– 'ಓಂ ನಮಃ ಶಿವಾಯ ಎಂಬ ಮಂತ್ರ ಸರ್ವಜನ ವಶ್ಯ'. 'ಬಡತನವೆಂಬ ಮಂತ್ರವಾದಿ ಹೋಗಲು ಒಡನೆ ನುಡಿವರು'. 'ಸಂಸಾರವೆಂಬುದು ಗಾಳಿಯ ಸೊಡರು'. 'ನಡೆಲಿಂಗ ಜಂಗಮ'. ಇಂತಹ ರೂಪಕಗಳು ಎಷ್ಟು ಅಡಕವಾಗಿವೆ! ಹೀಗೆ ಪುಟ್ಟ ರೂಪಕಗಳಲ್ಲಿ ದೊಡ್ಡ ಅರ್ಥವನ್ನು ಹುದುಗಿಸಿಟ್ಟಿರುವುದು ಬಸವಣ್ಣನವರ ವಚನಗಳಲ್ಲಿ ಮೇಲಿಂದ ಮೇಲೆ ಕಾಣತಕ್ಕ ಅಂಶ. ಬಿತ್ತದಲ್ಲಿ ಅಡಗಿದ ಮರ ಹೇಗೋ, ಇಂತಹ ರೂಪಕಗಳಲ್ಲಿ ಅಡಗಿದ ಅರ್ಥ ಹಾಗೆ. ಕೇಳುವವರಿಗೆ ಹೇಳುವವರ ಅಭಿಪ್ರಾಯ–ಅನಿಸಿಕೆಗಳು ಮನಸ್ಸಿನಲ್ಲಿ ಚೆನ್ನಾಗಿ ನಾಟಬೇಕು ಎಂಬುದೇ ಕವಿಯ ಉದ್ದೇಶವಾಗಿರುತ್ತದೆ. ಇದಕ್ಕಾಗಿ ರೂಪಕಗಳನ್ನು ಹೇರಳವಾಗಿ ಬಳಸುತ್ತ ಅದನ್ನು ಪುನರಾವರ್ತನೆಯೂ ಮಾಡುವುದುಂಟು.

***'ಮನವೇ ಸರ್ಪ, ತನುವೇ ಹೇಳಿಗೆ***
***ಹಾವಿನೊಡತಣ ಹುದುವಾಳಿಗೆ***
***ಇನ್ನಾವಾಗ ಕೊಂದಹುದೆಂದರಿಯೆ***
***ಇನ್ನಾವಾಗ ತಿಂದಹುದೆಂದರಿಯೆ***
***ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ ಅದೇ***
***ಗಾರುಡ ಕೂಡಲ ಸಂಗಮದೇವ'***

ಈ ಒಟ್ಟು ವಚನ ಒಂದು ರೂಪಕ, ಅರ್ಥದಲ್ಲಿ, ಅಭಿವ್ಯಕ್ತಿಯಲ್ಲಿ ಎಂತಹ ಸಮತೂಕವಿದೆ ಅಂದರೆ ಒಂದೇ ಧಾನ್ಯದ ಒಂದು ತೂಕವನ್ನು ಒಂದು ಪಡಿಗೆ ಹಾಕಿ ತೂಗಿ ತೋರುವ ರೀತಿಯಲ್ಲಿದೆ. ಮಾನವನ ಮನಸ್ಸು ಸಮತೋಲನವನ್ನು ಬಯಸುತ್ತದೆ. ಸಮತೋಲನವೇ ಸ್ವಸ್ಥಚಿತ್ತದ ಕುರುಹು. ಬಸವಣ್ಣನವರ ವಚನಗಳು ಈ ಸಮತೋಲನವನ್ನು ನಾನಾ ರೀತಿಯಲ್ಲಿ ಮೆರೆದಿದೆ. ಅನುಭವ

ತೀವ್ರತೆಯೂ ಇತರರ ಅನಿಸಿಕೆಗಳಿಗೆ ಮಿಡಿಯುವಂತೆ ಮಾಡುತ್ತದೆ. ಹಾಗಾಗಿ 'ಬಸವಣ್ಣನವರ ದೃಷ್ಟಿಯಲ್ಲಿ ರೂಪಕಗಳು ಸಾಗರದಲ್ಲಿ ಏಳುವ ಅಲೆಗಳಂತೆ ಇವು ವಚನವನ್ನು ಓದುಗ ಬೇಗ ಗ್ರಹಿಸಲು ಸಹಕಾರಿಯಾಗಿದೆ'.

ಕಾವ್ಯದಲ್ಲಿ ರೂಪಕವೇ ಎಲ್ಲವೂ ಅಲ್ಲ. ರೂಪಕವು ಕವಿ ಪ್ರತಿಭೆ, ಕೃತಿ ನಿರ್ಮಾಣದಲ್ಲಿ ತೊಡಗುವಾಗ ನಿರ್ಮಿಸುವ ಒಂದು ಅಭಿವ್ಯಕ್ತಿಯ ಪ್ರಕಾರ, ಕವಿ ಪ್ರತಿಭೆ ವಸ್ತುವೊಂದನ್ನು ಅರ್ಪಿಸುವಾಗ, ಅದು ಸಂಕೇತಗಳಲ್ಲಿ ಸಂಚರಿಸಿ ಪ್ರತೀಕಗಳಲ್ಲಿ ಮಿಂಚಿ, ಪ್ರತಿಮೆಗಳಲ್ಲಿ ಮಡುಗಟ್ಟಿ, ಅನೇಕಾರ್ಥಗಳನ್ನು ಪ್ರತಿಫಲಿಸುತ್ತಾ, ಅಭಿವ್ಯಕ್ತಿಗೆ ಸೊಗಸನ್ನು, ಅರ್ಥದೀಪ್ತಿ ಹಾಗೂ ಧ್ವನಿ ಪ್ರಚುರತೆಗಳನ್ನು ತಂದುಕೊಡುತ್ತದೆ. "ಪ್ರತಿಮೆ ಸ್ಥಾವರವಲ್ಲ; ನಿರಂತರ ಜಂಗಮ, ಕಾಲಪ್ರವಾಹದಂತೆ ಆ ಸಜೀವ ಪ್ರತಿಮೆ"[4]. 'ಸಮಸ್ತ ಕಾವ್ಯವೂ ಪ್ರತಿಮಾ ಪ್ರಪಂಚವೇ' ಎಂದು ಕುವೆಂಪು ಹೇಳಿದ್ದಾರೆ. "ರೂಪಕವಾಗಿ ಪ್ರಯೋಗವಾಗುವ ಅನೇಕ ಪ್ರತಿಮೆಗಳು ಬರಿಯ ಕೃತಕವಾಗದ ಕವಿಸಮಯಗಳಾಗಿರುತ್ತವೆ"[5].

**ಕೊನೆಟಿಪ್ಪಣಿಗಳು**


1. ಕುವೆಂಪು. (2020). *ತಪೋನಂದನ.* ಉದಯ ರವಿ ಪ್ರಕಾಶನ. ಪು. 70
2. ರಂಗಣ್ಣ, ಎಸ್.ವಿ. (2022). *ರನ್ನನ ಶೈಲಿ (ಶೈಲಿ– 1,2,3)* ಹೇಮಂತ ಸಾಹಿತ್ಯ. ಪು. 74
3. ರಂಗಣ್ಣ, ಎಸ್.ವಿ. (2024). ಕುಮಾರವ್ಯಾಸನ ಶೈಲಿ (ಶೈಲಿ– 1,2,3), ಶುಭೋದಯ ಬುಕ್ ಶಾಪ್. ಪು. 92
4. ಕುವೆಂಪು. (2010). *ಸಾಹಿತ್ಯದಲ್ಲಿ ಪ್ರತಿಮಾ (ರಸೋವೈಸಃ).* ಉದಯರವಿ ಪ್ರಕಾಶನ. ಪು. 33
5. ಕುವೆಂಪು. (2010). *ಸಾಹಿತ್ಯದಲ್ಲಿ ಪ್ರತಿಮಾ (ರಸೋವೈಸಃ).* ಉದಯರವಿ ಪ್ರಕಾಶನ. ಪು. 53